ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 110/2023

| | | |
|---|---|---|
| ಹೆಸರು | – | ಮೇಧಾ |
| ಗಂಡನ ಹೆಸರು | – | ನಾಗರಾಜ ನಾಯ್ಕ |
| ವಯಸ್ಸು | – | 46 ವರ್ಷ |
| ಉದ್ಯೋಗ | – | |
| ವಾಸ್ತವ್ಯ | – | ಹೊನ್ನೇಕೇರಿ, ಅಂಕೋಲಾ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 1– ಶ್ರೀಮತಿ ಗೀತಾ ದಿನೇಶ ಭಂಡಾರಕರ ಇವರು ತಮ್ಮ ಸಾಕ್ಷ್ಯದಲ್ಲಿ , ಅವರಿಗೆ ನಿಮ್ಮ ಪರಿಚಯ ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 3** ಪಿಡಬ್ಲ್ಯೂ 1 – ಇವರು ಮುಂದುವರಿದು, ನೀವು ಅವರ ಸ್ನೇಹಿತೆಯಾಗಿದ್ದು ನೀವು ಇದೇ ಸಾಲಿನ ಅಂದರೆ 2021 ನೇ ಇಸ್ವಿ ಜನೇವರಿ ತಿಂಗಳಲ್ಲಿ ಅವರನ್ನು ಭೇಟಿ ಮಾಡಿ ನೀವು ಕುಮಟಾ ತಾಲೂಕ ಹೆಗಡೆ ಗ್ರಾಮದಲ್ಲಿ ಒಂದು ಜಾಗ ಖರೀದಿಸಲು ಇಚ್ಚಿಸಿದ್ದು ಆ ಕುರಿತು ಹಣದ ಅಡಚಣೆ ಆಗುವದರಿಂದ ಅವರ ಸ್ನೇಹಿತೆಯಾದ ನೀವು ಅವರಿಗೆ ರೂ . 5,00,000/– ವನ್ನು ಕೈಗಡ ನೀಡಿದಲ್ಲಿ ತುಂಬಾ ಉಪಕಾರವಾಗುತ್ತದೆ ಸದರ ಹಣವನ್ನು ಅವರಿಗೆ ಒಂದು ತಿಂಗಳೊಳಗಾಗಿ ಪರತ್ ನೀಡುತ್ತೇನೆ ಎಂತಾ ಅವರ ಹತ್ತಿರ ಪರಿ ಪರಿಯಾಗಿ ಕೇಳಿಕೊಂಡಾಗ ನೀವು ಅವರ ಸ್ನೇಹಿತೆಯಾಗಿರುವದರಿಂದ ನಿಮ್ಮ ಮಾತನ್ನು ನಂಬಿದ ಅವರು ಅವರ ವ್ಯವಹಾರಕ್ಕಾಗಿ ಮತ್ತು ಮನೆ ರಿಪೇರಿ ಸಲುವಾಗಿ ಸಿಂಡಿಕೇಟ್

ಬ್ಯಾಂಕಿನ ಕುಮಟಾ ಶಾಖೆಯಿಂದ ಕಳೆದ ದಿಃ 19-11-2020 ರಂದು ತೆಗೆದ ರೂ. 1,50,000/- ಮತ್ತು ಸುವರ್ಣಕಾರರ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್ ಕುಮಟಾ ಇವರಲ್ಲಿ ದಿಃ 05-08-2020 ರಂದು ಮಾಡಿದ ಎರಡು ಬಂಗಾರದ ದಾಗಿನೆ ಸಾಲದ ಒಟ್ಟೂ ರಖಂ ರೂ. 31,000/- ಮತ್ತು ಸದರ ಸೊಸೈಟಿಯಲ್ಲಿ ದಿಃ 13-01-2021 ರಂದು ಮಾಡಿದ ದಾಗಿನೆ ಸಾಲ ರೂ. 55,000/-ಮತ್ತು ಸದರ ಸೊಸೈಟಿಯಲ್ಲಿ ದಿಃ 16-01-2021 ರಂದು ಮಾಡಿದ ದಾಗಿನೆ ಸಾಲ ರೂ. 99,300/- ಮತ್ತು ಅವರ ವೃತ್ತಿಯಿಂದ ಆಗಾಗ ಬಂದ ಕೂಡಿಟ್ಟ ರಖಂ ರೂ . 1,64,700/- ಹೀಗೆ ರೂ. 5,00,000/- ವನ್ನು ಸೇರಿಸಿ ದಿಃ 16-01-2021 ರಂದು ನಿಮಗೆ ರೋಖಾಗಿ ಕೊಟ್ಟಿದ್ದಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 4** ಪಿಡಬ್ಲ್ಯೂ 1 - ಇವರು ಮುಂದುವರಿದು, ಫಿರ್ಯಾದುದಾರರಿಂದ ನಿಮ್ಮ ಅಡಚಣೆಗಾಗಿ ಈ ರೀತಿ ರೂ. 5,00,000/- ರಖಂ ಪಡೆದ ನೀವು ಮಾತಿನಂತೆ ಅವರಿಗೆ ಸದರ ಹಣವನ್ನು ಪರತ್ ನೀಡದೇ ಇದ್ದಾಗ , ಅವರು ನಿಮ್ಮ ಹತ್ತಿರ ಸದರ ರಖಂಗಳನ್ನು ಪರತ್ ನೀಡುವಂತೆ ಪುನಃ ಪುನಃ ಕೇಳಿದಾಗ ನೀವು ಇಂದು ನಾಳೆ ಎಂತಾ ದಿನಹರಣ ಮಾಡಿ ನಂತರ ದಿಃ 22-03-2021 ರಂದು ಅವರನ್ನು ಭೇಟಿ ಮಾಡಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಇದರ ಅಂಕೋಲಾ ಶಾಖೆಯ ಚೆಕ್ ನಂ . 621795 ನೇದನ್ನು ರೂ. 5,00,000/-ಕ್ಕೆ ಬರೆದು ಅವರಿಗೆ ನೀಡಿದ್ದು ಇರುತ್ತದೆ ಮತ್ತು ಅದನ್ನು ನಗದೀಕರಿಸಿ ರಖಂ ಪಡೆದುಕೊಳ್ಳುವಂತೆ ಅವರಿಗೆ ತಿಳಿಸಿದ್ದು , ಸದರ ಚೆಕ್ ನ್ನು ಅವರು ನಿಮ್ಮಿಂದ ಪಡೆದುಕೊಂಡಿರುತ್ತೆನೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 5** ಪಿಡಬ್ಲ್ಯೂ 1 - ಇವರು ಮುಂದುವರಿದು, ಸದರ ಚೆಕ್ ನಗದೀಕರಣಕ್ಕೆ ಬಂದಾಗ ಅವರ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇರುವಂತೆ ನೋಡಿಕೊಳ್ಳುತ್ತೇನೆ ಎಂತಾ ಸಹಾ ನೀವು ಅವರಿಗೆ ಭರವಸೆ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 6** ಪಿಡಬ್ಲ್ಯೂ 1- ಇವರು ಮುಂದುವರಿದು, ನಿಮ್ಮ ಮಾತನ್ನು ನಂಬಿದ ಅವರು ಸದರ ಚೆಕ್ ನ್ನು ದಿಃ 17-05-2021 ರಂದು ಅವರ ಖಾತೆ ಇರುವ ಕೆನರಾ ಬ್ಯಾಂಕ್ ನ ಕುಮಟಾ ಶಾಖೆಯ ಮೂಲಕ ನಗದೀಕರಣಕ್ಕಾಗಿ ಕಳುಹಿಸಲಾಗಿ, ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಇದರ ಅಂಕೋಲಾ ಶಾಖೆಯ ನಿಮ್ಮ ಖಾತೆಯಲ್ಲಿ ಸದರ ಚೆಕ್ ನ್ನು ನಗದೀಕರಿಸುವಷ್ಟು ಹಣ ಜಮಾ ಇರುವುದಿಲ್ಲ ಎಂಬ ಕಾರಣದಿಂದ ಸದರ ಚೆಕ್ ಅಮಾನ್ಯವಾಗಿರುತ್ತದೆಂತಾ ತಿಳಿಸಿ ಕೆನರಾ ಬ್ಯಾಂಕ್ (ಹಿಂದಿನ ಸಿಂಡಿಕೇಟ್ ಬ್ಯಾಂಕ್ ) ನವರು ಅವರ ಮೆಮೋ ಸಹಿತ ದಿಃ 18-05-2021 ರಂದು ಚೆಕ್ ನ್ನು ಅವರಿಗೆ ಪರತ್ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 7** ಪಿ ಡಬ್ಲ್ಯೂ 1 - ರವರು ಮುಂದುವರೆದು , ನಂತರ ಅವರು ಅವರ ವಕೀಲರ ಮೂಲಕ ಅವರಿಗೆ ಬರತಕ್ಕ ಚೆಕ್ ನಲ್ಲಿ ಕಾಣಿಸಿದ ರೂ. 5,00,000/- ವನ್ನು ನೋಟಿಸು ಮುಟ್ಟಿದ 15 ದಿನಗಳಲ್ಲಿ ವಸೂಲ ಕೊಟ್ಟು ಪಾವತಿ ಪಡೆದುಕೊಳ್ಳಬೇಕೆಂತ ತಿಳಿಸಿ ದಿಃ 12-06-2021 ರಂದು ನಿಮಗೆ ನೋಟಿಸು ಕೊಟ್ಟಿರುವುದಾಗಿ ಹೇಳಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 8** ಪಿಡಬ್ಲ್ಯೂ 1 - ಇವರು ಮುಂದುವರಿದು, ಸದರ ನೋಟಿಸು ನಿಮಗೆ ದಿಃ 19-06-2021 ರಂದು ಜ್ಯಾರಿ ಆಗಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 9** ಪಿಡಬ್ಲ್ಯೂ 1 - ಇವರು ಮುಂದುವರಿದು, ಅವರು ವಕೀಲರ ಮೂಲಕ ನೀಡಿದ ನೋಟಿಸು ನಿಮಗೆ ಜ್ಯಾರಿ ಆದರೂ ಸಹ ನೀವು ಸದರ ನೋಟಿಸಿಗೆ ಉತ್ತರವನ್ನೂ ಕೊಡದೇ , ಫಿರ್ಯಾದಿಗೆ ಕೊಡಬೇಕಾದ ಹಣವನ್ನು ವಾಪಸ್ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 10</u>** ಪಿಡಬ್ಲ್ಯೂ 1 – ಇವರು ಮುಂದುವರಿದು, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲಾದ್ದು ಗೊತ್ತಿರುತ್ತ ಬುದ್ಯಾ ಅವರಿಗೆ ಹಣ ಕೊಡುವದನ್ನು ತಪ್ಪಿಸಿಕೊಳ್ಳುವ ದುರ ಹೇತುವಿನಿಂದ ಅವರಿಗೆ ಬೋಗಸ್ ಚೆಕ್ ಕೊಟ್ಟು ನೆಗೋಷಿಯೇಬಲ್ ಇನ್ಸ್ಟ್ರೂಮೆಂಟ ಕಾಯ್ದೆದನ್ವಯ ಅಪರಾಧವೆಸಗಿರುತ್ತೀರಿ ಹಾಗೂ ಫಿರ್ಯಾದಿಗೆ ಮೋಸ ಪಡಿಸಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 11</u>** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

<u>ಉತ್ತರ –</u>

**<u>ಪ್ರಶ್ನೆ – 12</u>** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

<u>ಉತ್ತರ –</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 03-03-2025.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ